persons in which one or two people misbehave and sometimes even if nobody misbehaves there will be some incidents oue to misunderstanding between the people present in the procession. Such things should not happen but in this case it has happened. It is a very unfortunate thing.

SRI P.A. PAWASHE.— Sir, recently during Holi festival stones and other materials we thro wn on the processionists led by Hindus. This incident has happened in Belgaum City. This is going on in several cities due to the presence of anti-social elements in our society which result in disturbing communal harmony between two communities. In view of this I would like to know what steps the Government proposes to take to stop these unhappy things.

SRI M. VEERAPPA MOILY.—It is most unfortunate that such a thing happened in Belgaum city. We have already filed cases against the persons responsible. It is also the concern of the Government that communal harmony and good relationship is maintained as between two communities and I think at present there is no problem as such and by now things must have been settled.

SRI P. A. PAWASHE.—According to the report the loss due to the incident runs to saveral thousands. I would like to know whether any compensation has been paid to those people, if not, would the Government take steps to arrange and pay compensation to the persons to whom loss has been caused in that incident.

SRI M. VEERAPPA MOILY.—At present I do not have that information. Anyway we will definitely look into it.

Regularisation of workers working on daily wages at Ghataprabha Project

555. SRI R. S. NADONI (Raibag).—Will the Minister of State for Major and Medium Irrigation be pleased to state :—

(a) the number of workers working on daily wages at Ghataprabha project ;

(b) whether the Government intends to regularise these workers who are working on daily wages for the last 10 years in this Project ;

(c) whether any compensation is being paid by the Government to the next of kin in case of sudden death of the worker who is working on daily wages in this Project ;

(d) if not, whether the Government will consider this issue ?

SRI B. B. CHIMMANAKATTI (Minister of State for Major and Medium Irrigation):—

(a) 1,235.

(b) At present this matter is not under consideration of the Government.

(c) Yes.

(d) This question does not arise.

ಶ್ರೀ ಆರ್. ಎಸ್. ನಡೋಣಿ.—ನಾನು ಘಟಪ್ರಭಾ ಯೋಜನೆಯಲ್ಲಿ ಕೆಲಸ ಮಾಡುತ್ತಿರುವ ದಿನಗೂಲಿಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದಕ್ಕೆ, ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ೧,೨೩೫ ಜನಗಳು ಎಂದು ಹೇಳಿದ್ದಾರೆ. ಅವರು ಅಲ್ಲಿ ಎಷ್ಟು ವರ್ಷಗಳಿಂದ ದಿನಗೂಲಿಯ ಮೇಲೆ ಕೆಲಸ ಮಾಡುತ್ತಿದ್ದಾರೆ ?

ಶ್ರೀ ಬಿ. ಬಿ ಚಿಮ್ಮನಕಟ್ಟಿ.—ಬೇರೆ ಬೇರೆ ಸರ್ಕಲ್‌ಗಳಲ್ಲಿ ನಾಲ್ಕಾರು ವರ್ಷಗಳಿಂದ ಕೆಲಸ ಮಾಡುತ್ತಿರಬಹುದು.

ಶ್ರೀ ಆರ್. ಎಸ್. ನಡೋಣಿ.—ಸುಮಾರು ಹತ್ತು ಹದಿನೈದು ವರ್ಷಗಳಿಂದ ಕೆಲಸ ಮಾಡುತ್ತಿರುವ ದಿನಗೂಲಿ ಜನರನ್ನು ಖಾಯಂಗೊಳಿಸುವ ವಿಚಾರ ಸರ್ಕಾರದ ಗಮನದಲ್ಲಿದೆಯೆ ಎಂದು ಕೇಳಿದಾಗ ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಹೌದು ಎಂದು ಹೇಳಿದ್ದಾರೆ. ಇನ್ನು ಮುಂದಾದರೂ ದಿನಗೂಲಿಯ ಮೇಲೆ ಕೆಲಸ ಮಾಡುವವರನ್ನು ಖಾಯಂಗೊಳಿಸುತ್ತೀರಾ ? ಎಷ್ಟು ವರ್ಷಗಳಲ್ಲಿ ಖಾಯಂಗೊಳಿಸುತ್ತೀರಿ ? ಖಾಯಂಗೊಳಿಸದಿರಲು ಕಾರಣವೇನು ?

ಶ್ರೀ ಬಿ ಬಿ. ಚಿಮ್ಮನಕಟ್ಟಿ.—ಒಂದು ಯೋಜನೆಯ ಕೆಲಸವನ್ನು ಶುರುಮಾಡಿದಾಗ ಅಂತಹ ಸಂದರ್ಭದಲ್ಲಿ ದಿನಗೂಲಿ ನೌಕರರನ್ನು ಕೆಲಸವನ್ನು ಮುಗಿಸುವುದಕ್ಕೋಸ್ಕರ ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳುತ್ತೇವೆ. ಆ ಕೆಲಸ ಮುಗಿದ ಮೇಲೆ ಅವರನ್ನು ನಾವು ಕೆಲಸದಿಂದ ತೆಗೆಯಲೇಬೇಕಾಗಿರುತ್ತದೆ, ಆದ್ದರಿಂದ ನೇಮಕ ಮಾಡಿಕೊಳ್ಳುವಾಗಲೇ ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳುತ್ತೇವೆ, ಯಾರನ್ನೂ ಖಾಯಂ ಆಗಿ ನೇಮಕ ಮಾಡಿಕೊಳ್ಳುವುದಿಲ್ಲ. ನೀರಾವರಿ ಇಲಾಖೆ ಮತ್ತು ಬೇರೆ ಬೇರೆ ಇಲಾಖೆಯಲ್ಲಿ ಕೂಡ ದಿನಗೂಲಿ ನೌಕರರು ಇದ್ದಾರೆ. ಲೋಕೋಪಯೋಗಿ ಇಲಾಖೆಯೊಂದರಲ್ಲೇ ೧೩ ಸಾವಿರ ಜನ ದಿನಗೂಲಿ ಕೆಲಸಗಾರರು ಇದ್ದಾರೆ. ಅವರ ಬೇಡಿಕೆಗಳನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಯಾವುದೇ ರೀತಿಯಲ್ಲಿ ನಮ್ಮನ್ನು ರೆಗ್ಯೂಲರೈಸ್ ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಸರ್ಕಾರ ಅವರ ಬೇಡಿಕೆಯನ್ನು ಮನವರಿಕೆ ಮಾಡಿಕೊಂಡು ಈಗಾಗಲೇ ಒಂದು ಸಮಿತಿಯನ್ನು ನೇಮಕ ಮಾಡಲಾಗಿದೆ. ದಿನಗೂಲಿ ನೌಕರರಿಗೆ ಎಷ್ಟರಮಟ್ಟಿನ ಸಹಾಯ ಮಾಡಬೇಕೆಂಬ ವಿಷಯವನ್ನು ಆ ಸಮಿತಿಯ ಮುಂದೆ ಇಟ್ಟು ಪರಿಶೀಲನೆ ಮಾಡಲಾಗುತ್ತದೆ.

ಶ್ರೀ ಆರ್. ಎಸ್. ನಡೋಣಿ.—ನನ್ನ (ಇ) ಪ್ರಶ್ನೆ ಸದರಿ ಯೋಜನೆಯಲ್ಲಿ ದುಡಿಯುತ್ತಿರುವ ದಿನಗೂಲಿ ಕೆಲಸಗಾರನು ಆಕಸ್ಮಾತ್ ಮರಣ ಹೊಂದಿದರೆ ಅವನ ಕುಟುಂಬಕ್ಕೆ ಸರ್ಕಾರದಿಂದ ಏನಾದರೂ ಸಹಾಯ ದೊರೆಯುತ್ತದೆಯೇ ಎಂದು ಕೇಳಿದ್ದಕ್ಕೆ, ಮಂತ್ರಿಗಳು ಉತ್ತರದಲ್ಲಿ ಹೌದು ಎಂದು ಹೇಳಿದ್ದಾರೆ. ನಮ್ಮ ರಾಯಬಾಗ್ ತಾಲ್ಲೂಕಿನ ೧೦-೧೫ ವರ್ಷಗಳಿಂದ ದಿನಗೂಲಿಯ ಮೇಲೆ ಕೆಲಸ ಮಾಡುತ್ತಿದ್ದವನೊಬ್ಬ ಆಕಸ್ಮಾತ್ ಮರಣ ಹೊಂದಿದ್ದಾನೆ. ಆತನ ಹೆಂಡತಿ ಮಕ್ಕಳು ಬಹಳ ತೊಂದರೆಯಲ್ಲಿದ್ದಾರೆ. ಅವರು ಸರ್ಕಾರಕ್ಕೆ ಅರ್ಜಿ ಹಾಕಿಕೊಂಡಿದ್ದಾರೆ. ಅವರಿಗೆ ಇದುವರೆಗೆ ಯಾವುದೇ ತರಹ ಸಹಾಯ ದೊರೆತಿಲ್ಲ. ಮಾನ್ಯ ಮಂತ್ರಿಗಳು ಅವರಿಗೆ ಸಹಾಯವನ್ನು ದೊರಕಿಸಿ ಕೊಡುತ್ತೀರಾ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಆಕಸ್ಮಾತ್ ನಿಧನ ಹೊಂದಿದವರ ಹೆಂಡತಿ ಮಕ್ಕಳಿಗೆ ಪರಿಹಾರ ಕೊಡಲು, ನಮ್ಮ ಇಲಾಖೆಯಿಂದ ಏನಾದರೂ ಅನಾಹುತವಾಗಿದ್ದರೆ ವಿವರ ತರಿಸಿಕೊಂಡು ಅವರಿಗೆ ಪರಿಹಾರ ಕೊಡುತ್ತೇನೆ. ಆದರ ಬಗ್ಗೆ ಏನಾದರೂ ವಿವರಗಳಿದ್ದರೆ ಸದಸ್ಯರು ತಂದು ಕೊಡಿ ನಾನು ಚೌಕಾಸಿ ಮಾಡಿ ಪರಿಹಾರ ಕೊಡಿಸುವ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಪಂಪಾಪತಿ.—ದಿನಗೂಲಿಯ ಮೇಲೆ ಐದಾರು ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ದಿನಗೂಲಿಯ ಮೇಲೆ ಕೆಲಸ ಮಾಡುತ್ತಿರುವವರನ್ನು ಖಾಯಂ ಮಾಡುತ್ತೇವೆಂದೂ, ಹಾಗೂ ಕನಿಷ್ಟ ಕೂಲಿಯನ್ನು ನಿಗದಿ ಮಾಡಿದ್ದೇವೆಂದು ಹೇಳಿದ್ದಾರೆ. ಕನಿಷ್ಟ ಕೂಲಿಯನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದೀರಾ ಎಂಬುದನ್ನು ಮಂತ್ರಿಗಳು ತಿಳಿಸಬೇಕು ?.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಆವಶ್ಯಕತೆಗನುಗುಣವಾಗಿ ದಿನಗೂಲಿಯ ಮೇಲೆ ತೆಗೆದುಕೊಂಡರೆ, ಕೆಲಸ ಇಲ್ಲದೆ ಇದ್ದಾಗ ಅವರುಗಳನ್ನು ಕೆಲಸದಿಂದ ತೆಗೆದುಹಾಕುತ್ತೇವೆ. ಇವರುಗಳನ್ನು ಆದಷ್ಟು ಬೇಗ ಖಾಯಂ ಮಾಡಬೇಕೆಂದು, ಇವರಿಗೊಂದು ಶಾಶ್ವತವಾದ ನೆಲೆಯನ್ನು ಮಾಡಿಕೊಡಬೇಕೆನ್ನುವ ದೃಷ್ಟಿಯನ್ನಿಟ್ಟುಕೊಂಡು ನಾವು ಒಂದು ಸಮಿತಿಯನ್ನು ಮಾಡಿದ್ದೇವೆ. ಇವರುಗಳಿಗೆ ಸರಿಯಾದ ವೇತನ ಫಿಕ್ಸ್ ಮಾಡುವುದು, ರೆಗ್ಯೂಲರೈಸ್ ಮಾಡುವುದಕ್ಕೆ ಸೂಕ್ಷ್ಮವಾಗಿ ಪರಿಶೀಲನೆ ಮಾಡಿದ ನಂತರ ಕ್ರಮ ಕೈಗೊಳ್ಳಲಾಗುತ್ತದೆ.

ಶ್ರೀ ಪಂಪಾಪತಿ.—ಕನಿಷ್ಟ ಕೂಲಿ ದರವನ್ನು ನಿಗದಿ ಮಾಡಿದ್ದೀರಾ ? ಹಾಗೆ ಮಾಡಿದ್ದರೆ ಅದನ್ನು ಯಾವಾಗ ಜಾರಿಗೆ ಕೊಡುತ್ತೀರಿ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಕನಿಷ್ಟ ಕೂಲಿಯನ್ನು ನಿಗದಿ ಮಾಡಿಲ್ಲ.

ಡಾ॥ ಎಚ್. ಎಲ್. ತಿಮ್ಮೇಗೌಡ.—ಖಾಸಗೀ ಉದ್ಯಮಗಳಲ್ಲಿ ಕೆಲಸ ಮಾಡುತ್ತಿರುವ ದಿನಗೂಲಿ ನೌಕರರನ್ನು ಯಾವ ರೀತಿ ನೋಡಿಕೊಳ್ಳಬೇಕೆಂಬ ಬಗ್ಗೆ ಒಂದು ಕಾನೂನನ್ನು ಮಾಡಲಾಗಿದೆ. ಆ ನಿಯಮವನ್ನು ಸರ್ಕಾರ ಪರಿಪಾಲನೆ ಮಾಡುತ್ತಿದೆಯೆ ಎನ್ನುವುದು ನನ್ನ ಪ್ರಶ್ನೆ ಏಕೆಂದರೆ ಸರ್ಕಾರವೇ ಕಾನೂನನ್ನು ಪರಿಪಾಲನೆ ಮಾಡಲಿಲ್ಲ ಅಂದರೆ ಖಾಸಗೀ ಉದ್ದಿಮೆದಾರರು ನಗುತ್ತಾರೆ. ದಯವಿಟ್ಟು ಈ ನಿಯಮವನ್ನು ಸರ್ಕಾರವು ಕೂಡ ಪರಿಪಾಲನೆ ಮಾಡುತ್ತದೆಯೆ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಈ ವಿಷಯವನ್ನು ಪರಿಶೀಲನೆ ಮಾಡುತ್ತೇನೆ.

MR. DEPUTY SPEAKER.—Next question. Hon'ble Member Sri G.L. Asthekar to put question No.170 (591).

SRI P.A. PAWASHE.—Sir, hon. Member is not present. Since this pertains to Belgaum City in respect of opening of Veterinary College which is very important one I may be permitted to put this questi on on behalf of G.S. Asthekar.

MR. DEPUTY SPEAKER.—I have not received any authorisation from him. You cannot put the question.

Lift Irrigation Scheme near Hunduwadi and Yachegowdanahalli.

718. SRI D. JAYADEVARAJ URS. (Chamundeshwari).—Will the Minister for Transport and Minor Irrigation be pleased to state.—

(a) whether Lift Irrigation Scheme near Handuwadi and Yachegowdanahalli (Ilawala Hobli) of Mysore Taluk has been estimated;

(b) if so; what is the estimated cost?

SRI M.M.J. SADYOJATHA (Minister for Transport and Minor Irrigation)—

(a) (i) Hunduvadi Lift Irrigation Scheme has been examined and dropped.

(ii) Lift Irrigation Scheme near Yachegowdanahalli has been estimated.